ಹಮ್ಮಿಕೊಂಡಿದ್ದೇವೆ ಎನ್ನತಕ್ಕಂಥಾದ್ದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲು ಬಯಸುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ ಕೃಷ್ಣಪ್ಪನವರೇ. ಎಲ್ಲಾ ಸಮಾಧಾನವಾಗಿ ಹೇಳಿದ್ದಾರೆ. ಇನ್ನೂ ಏನಾದರೂ ಇದ್ದರೆ ಮೈಸೂರಿನಲ್ಲಿ ಸಿಕ್ಕಿದಾಗ ಮಾತನಾಡಿಕೊಳ್ಳಿ.

ಅನುದಾನಿತ ಕಾಲೇಜುಗಳಲ್ಲಿ ಪ.ಜಾ./ಪ.ಪಂ. ವಿದ್ಯಾರ್ಥಿಗಳ ಪ್ರವೇಶಾವಕಾಶ.

252 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಅನುದಾನಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಮೀಸಲಾತಿ ಪ್ರಕಾರ ಸೀಟು ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.*

ಆ) *ಹಾಗಿದ್ದಲ್ಲಿ ಈ ಕಾಲೇಜುಗಳಲ್ಲಿ ಸರ್ಕಾರದ ಮೀಸಲಾತಿ ಕಡ್ಡಾಯ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿರುವುದಿಲ್ಲ.

ಆ) ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರೇ, ಅನುದಾನಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಯಾವ ಪ್ರಮಾಣದಲ್ಲಿ ಮೀಸಲಾತಿ ನೀಡುತ್ತಿದ್ದೀರಿ ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಮೀಸಲಾತಿ ಪ್ರಕಾರ ಸೀಟು ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಬಂದಿರುವುದಿಲ್ಲ ಎಂದು ಹೇಳುತ್ತೀರಿ. ತಾವು ಯಾವ ಪ್ರಮಾಣದಲ್ಲಿ ನೀಡುತ್ತಿದ್ದೀರಿ ಎನ್ನುವುದನ್ನು ಸಭಾದ್ಯಕ್ಷರ ಮೂಲಕ ನಾನು ಕೇಳುತ್ತಿದ್ದೇನೆ. ಮತ್ತು ನನಗೆ ಗೊತ್ತಿರುವ ಮಟ್ಟಿಗೆ ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಅದು ಬೆಂಗಳೂರಾಗಲೀ, ಮೈಸೂರಾಗಲೀ, ಮಂಗಳೂರಾಗಲೀ...

ಅಧ್ಯಕ್ಷರು : ಒಂದು ನಿಮಿಷ. ಯಾವ ಪ್ರಮಾಣದಲ್ಲಿ ಕೊಡುತ್ತಿದ್ದೀರಿ, ಅದನ್ನು ಹೇಳಿಬಿಡಿ. ಯಾವ ಪ್ರಮಾಣದಲ್ಲಿ ಕೊಡುತ್ತಿದ್ದೀರಿ, ಪರ್ಸೆಂಟೇಜ್ ಏನು ಎಂದು ಹೇಳಿ.

ಶ್ರೀ ಬಿ. ಸೋಮಶೇಖರ್ : ಈಗಾಗಲೇ ಎಲ್ಲಾ ಖಾಸಗೀ ಸಂಸ್ಥೆಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದರ ಪ್ರಕಾರ ಯಾವ ಯಾವ ಕಮ್ಯುನಿಟಿಗೆ ಅಂದರೆ ಎಸ್.ಸಿ., ಎಸ್.ಟಿ.ಯವರಿಗೆ, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಎಷ್ಟೆಷ್ಟು ಕೊಡಬೇಕು ಎನ್ನುವ ಆದೇಶವನ್ನು ಗೋವಿಂದೇಗೌಡರು ಮತ್ತು ನಾವು ಇಬ್ಬರು ಮಂತ್ರಿಗಳೂ ಸೇರಿ ಮಾಡಿದ್ದೇವೆ. ಇನ್ನೊಂದು ವಿಷಯವನ್ನು ಏನು ಯೋಚನೆ ಮಾಡುತ್ತಿದ್ದೇವೆ ಎಂದರೆ, ಮುಂದಿನ ಸಲದಿಂದ, ಪ್ರೊಫೆಷನಲ್ ಕಾಲೇಜುಗಳಿಗೆ ಯಾವ ರೀತಿ ಸಿ.ಇ.ಟಿ. ಪರೀಕ್ಷೆಯನ್ನು ಮಾಡುತ್ತಿದ್ದೇವೆ, ಅದೇ ರೀತಿ ಮಾಡಬೇಕು ಎಂದು ಇದ್ದೇವೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ ಬಸವರಾಜು ಅವರೇ. ಅನುದಾನಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ

ಮೀಸಲಾತಿ ಪ್ರಕಾರ ಸೀಟು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ನೀವು ಬಂದಿರುವುದಿಲ್ಲ ಎಂದು ಹೇಳಿದ್ದೀರಿ. ಅವರು ಹೇಳುತ್ತಿರುವುದು, ನೀವು ಮೀಸಲಾತಿ ಕೊಡುತ್ತಿರುವುದಾದರೆ ಯಾರ ಅನುಪಾತದಲ್ಲಿ ಕೊಡುತ್ತಿದ್ದೀರಿ, ಎಷ್ಟು ಪರ್ಸೆಂಟೇಜ್ ಕೊಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ಯಾವುವು ಪ್ರೈವೇಟ್ ಏಡೆಡ್ ಕಾಲೇಜುಗಳಿವೆ, ಅಲ್ಲಿ ಎಸ್.ಸಿ. ಮತ್ತು ಎಸ್.ಟಿ. ಮಕ್ಕಳಿಗೆ ಸೀಟು ಕೊಡುವುದಕ್ಕೆ ನೀವೇನಾದರೂ ಪರ್ಸೆಂಟೇಜ್ ಫಿಕ್ಸ್ ಮಾಡಿದ್ದೀರಾ? ಮಾಡಿದ್ದರೆ, ಮಾಡಿದ್ದೇವೆ ಎಂದು ಹೇಳಿ ಮತ್ತು ಅದು ಎಷ್ಟು ಎಂದು ಹೇಳಿ.

ಶ್ರೀ ಬಿ. ಸೋಮಶೇಖರ್ : ಎಸ್.ಸಿ., ಎಸ್.ಟಿ.ಯವರಿಗೆ 15 ಮತ್ತು 3ರ ಪ್ರಮಾಣದಲ್ಲಿ ಸೀಟು ಕೊಡಬೇಕು ಎಂದು ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ.

ಅಧ್ಯಕ್ಷರು : ಯಾವುದಾದರೂ ಕಾಲೇಜಿನವರು ಅದು ಬೆಂಗಳೂರಿನವರಾಗಲೀ, ಇನ್ನೊಂದು ಊರಿನವರಾಗಲೀ, ಆ ಪರ್ಸೆಂಟೇಜ್ ಪ್ರಕಾರ ಸೀಟು ಕೊಟ್ಟಿಲ್ಲ ಎಂದರೆ ಸರ್ಕಾರದವರು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ. ಬಸವರಾಜು : ತಾವು ಹೇಳಿದ್ದು ನನಗೆ ಅರ್ಥವಾಯಿತು. ಆದರೆ ನಾನು ಹೇಳುವುದು ಏನೆಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳುಗಳು ಪ್ರತಿಷ್ಟಿತ ಕಾಲೇಜುಗಳಿಗೆ ಹೋದರೆ 70-80 ಪರ್ಸೆಂಟ್ ಇದ್ದರೆ ಮಾತ್ರ ಅಪ್ಲಿಕೇಷನ್ ಕೊಡುತ್ತೇವೆ ಎಂದು ಹೇಳುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 50-60 ಪರ್ಸೆಂಟ್ ಇತ್ತು ಎಂದರೂ ಕೂಡ ಅಡ್ಮಿಷನ್‌ಗೆ ಅಪ್ಲಿಕೇಷನ್ ಕೊಡುವುದಿಲ್ಲ. ಇದು ಪ್ರತಿವರ್ಷ ನಡೆದು ಬಂದಿರುವಂಥ ರೀತಿ. ಏಕೆಂದರೆ ಅವರ ಮೇಲೆ ಸರ್ಕಾರದ ಯಾವುದೇ ಒಂದು ನಿಯಂತ್ರಣ ಇಲ್ಲ. ಯಾವ ಕಾಲೇಜುಗಳು ಎಂದು ನಿರ್ದಿಷ್ಟವಾಗಿ ಬೇಕು ಎಂದರೆ ಎಂ.ಎಸ್. ಅನ್ನೇ ತೆಗೆದುಕೊಳ್ಳಿ, ಮಂಗಳೂರಿಗೆ ಬರುತ್ತಿರೋ?

ಅಧ್ಯಕ್ಷರು : ಬಸವರಾಜುರವರೇ, ನಾವು ವಿಧಾನಸಭೆಯಲ್ಲಿದ್ದೇವೆ. ನೀವು ಸರ್ಕಾರವನ್ನು ಪ್ರಶ್ನೆ ಕೇಳುತ್ತಿದ್ದೀರಿ. ಇಲ್ಲಿ ನಾವು ಸಾರಾಸಗಟಾಗಿ ಮಾತನಾಡುವುದು ಬೇಡ. ಇಂಥ ಕಾಲೇಜಿನವರು ಕೊಟ್ಟಿಲ್ಲ, ಇಂಥ ಕಾಲೇಜಿನವರು ನಿರಾಕರಿಸಿದ್ದಾರೆ ಎಂದು ಹೇಳಿದರೆ, I will direct the Government to take immediate action. Do you have any specific information with you?

ಶ್ರೀ ಹೆಚ್.ಡಿ. ಬಸವರಾಜು : ನಿರ್ದಿಷ್ಟವಾದ ಮಾಹಿತಿಯನ್ನು ತಮಗೆ ಹೇಳುತ್ತೇನೆ. ನಾನು ಹೇಳುವುದೇನೆಂದರೆ ಬೆಂಗಳೂರಿನಲ್ಲಿರುವಂಥ ಯಾವುದೇ ಒಂದು ಪ್ರತಿಷ್ಟಿತ ಕಾಲೇಜು 15 ಮತ್ತು 3ರ ಪ್ರಮಾಣದಲ್ಲಿ ಹೋದವರ್ಷ ಸೀಟುಗಳನ್ನು ಕೊಟ್ಟಿಲ್ಲ, ಸರ್ಕಾರದ ಯಾವುದೇ ಒಂದು ನಿಯಂತ್ರಣ ಅವರ ಮೇಲೆ ಬಂದಿಲ್ಲ. ಮೈಸೂರಾಗಲೀ, ಬೆಂಗಳೂರಾಗಲೀ, ಮಂಗಳೂರಾಗಲೀ, ಈ ಊರುಗಳಲ್ಲಿ, ನನಗೆ ಗೊತ್ತಿರುವ ಮಟ್ಟಿಗೆ....

ಅಧ್ಯಕ್ಷರು : ಇನ್ನು ನಾನು ಸಹಾಯ ಮಾಡುವುದಕ್ಕೆ ಆಗುವುದಿಲ್ಲ. Which are those prestigious colleges? ಪ್ರತಿಷ್ಟಿತ ಕಾಲೇಜುಗಳು ಎಂದರೆ ನಿರ್ದಿಷ್ಟವಾಗಿ ಯಾವುವು? ಎಷ್ಟು ಇವೆ?

ಶ್ರೀ ಹೆಚ್.ಡಿ. ಬಸವರಾಜು : ಬೆಂಗಳೂರಿನಲ್ಲಿ ಎಂ.ಇ.ಎಸ್. ವಿಜಯಾ ಕಾಲೇಜು ಈ ರೀತಿಯವು.

ಶ್ರೀ ಬಿ. ಸೋಮಶೇಖರ್ : ನಾನು ಒಪ್ಪುತ್ತೇನೆ. ಕೆಲವು ಕಾಲೇಜುಗಳು ಈ ಒಂದು ನಿರ್ದೇಶನಗಳನ್ನು ಉಲ್ಲಂಘನೆ ಮಾಡುತ್ತಿರಬಹುದು ಎನ್ನುವ ವದಂತಿ ಬರುತ್ತಿವೆ. ಆದರೆ ಸ್ಪಷ್ಟವಾದಂಥ ಪ್ರಕರಣಗಳಾವುವು ನನ್ನ ಗಮನಕ್ಕೆ ಬಂದಿಲ್ಲ.

11.30 ಎ.ಎಂ.

ಆದರೆ ಮುಂದಿನ ಸಲದಿಂದ ಇದನ್ನು ನಿಯಂತ್ರಣ ಹೇಗೆ ಮಾಡಬೇಕು ಎನ್ನತಕ್ಕಂಥದ್ದನ್ನು...

Mr. Speaker : In the interest of SC/ST Students. ನಾನು ಒಂದು ಮಾತನ್ನು ಹೇಳುತ್ತೇನೆ. Hon.Member is not clear, to help the member..

Sri B. Somashekhar : Not only in the interest of SC/ST students but also other categoriess should be given adequate representation.

Mr. Speaker : Not that. In the interest of those students please tell your Directorate of Collegiate Education, after this Session, to furnish you the list of admissions they have made, in all the Colleges and please see if they have maintained this? Aided Colleges ನಮ್ಮ ಸರ್ಕಾರದ ಹಣವನ್ನು ತೆಗೆದುಕೊಂಡು ನಮ್ಮ ನಿಯಮಾವಳಿ ಪ್ರಕಾರ ಮೀಸಲಾತಿ ಕೊಡುವುದಿಲ್ಲ ಎಂದರೆ they have no business to receive the aid. Stop the aid. Any institution that does not provide reservation to these students, stop the aid to these institutions. That is the best thing.

ಅಧ್ಯಕ್ಷರು : ಪ್ರಶ್ನೆ 411ಕ್ಕೆ ಸರ್ಕಾರದವರು ಕಾಲಾವಕಾಶ ಕೇಳಿದ್ದಾರೆ. ಮುಂದಿನ ಅಧಿವೇಶನದಲ್ಲಿ ಗೋವಿಂದೇಗೌಡರಿಗೆ ಹೇಳಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ಸಾಕ್ಷರತಾ ಆಂದೋಲನದಲ್ಲಿ ತೊಡಗಿರತಕ್ಕಂಥ ಕೆಲವರು ಪ್ರತಿಫಲ ಅಪೇಕ್ಷೆಯಿಲ್ಲದೆ ಸಂಪನ್ಮೂಲ ವ್ಯಕ್ತಿಗಳಾಗಿ, ಮಾರ್ಗದರ್ಶಿಗಳಾಗಿ ಕೆಲಸ ಮಾಡಿರುವ ವ್ಯಕ್ತಿಗಳನ್ನು ಸರ್ಕಾರಿ ಉದ್ಯೋಗಕ್ಕೆ ಆಯ್ಕೆ ಮಾಡುವಾಗ ಇವರಿಗೆ ಹೆಚ್ಚು ವೈಟೇಜ್ ಕೊಡಬೇಕೆಂದು ಒಂದು ಪ್ರಶ್ನೆ ಕೇಳಿದ್ದೇನೆ. ಅದನ್ನು ಕಾರ್ಯಗತ ಮಾಡುವುದರಿಂದ ಬಹುಶಃ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೇಳಿದ್ದೇನೆ.

ಅಧ್ಯಕ್ಷರು : ಇಡೀ ಸರ್ಕಾರವೇ ನಿಮ್ಮ ಬೆಂಬಲಕ್ಕೆ ನಿಲ್ಲುತ್ತದೆ. ಮಾಡಿಕೊಡುತ್ತಾರೆ ಬಿಡಿ.

ದಾವಣಗೆರೆ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಉಪನ್ಯಾಸಕರ ಹುದ್ದೆಗಳ ಭರ್ತಿ.

2558 - ಶ್ರೀ ಎಸ್.ಎ. ರವೀಂದ್ರನಾಥ (ಮಾಯಕೊಂಡ) : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ಉಪನ್ಯಾಸಕರ ಹುದ್ದೆಗಳ ಖಾಲಿ ಇವೆ?